Sri R. Dayananda Rao : -We are serious only.

(ಈ ಹಂತದಲ್ಲಿ ಮಾನ್ಯ ಶ್ರೀ ಎಸ್. ಬಂಗಾರಪ್ಪನವರು, ಶ್ರೀ ನಜೀರ್ ಅಹಮದ್‌ರವರು, ಶ್ರೀ ಕೆ.ಜೆ.ಜಾರ್ಜ್ ಮತ್ತು ಬಂಗಾರಪ್ಪನವರ ಕೆಲವು ಬೆಂಪಿಬಲಗ ಸದಸ್ಯರು ಸಭಾತ್ಯಾಗ ಮಾಡಿದರು.)

ಶ್ರೀ ವೈ.ಕೆ.ರಾಮಯ್ಯ :- ಸನ್ಮಾನ್ಯ ಅಧ್ಯಕ್ಷರೇ, ನಾವು ಇಲ್ಲದಿದ್ದರೂ ನಡೆದುಹೋಗುತ್ತದೆ. ನಾವೆಲ್ಲರೂ ಮೊನ್ನೆ ಈ ಸದನದಿಂದ ಹೋಗುವಾಗ, ಬಹಳ ಜನ ಸ್ನೇಹಿತರು ತಮಾಶೆ ಮಾಡುತ್ತಿದ್ದರು. ಕೆಲವರು ಈ ಸ್ಥಾನಗಳಿಗೆ ಶರಣು ಮಾಡಿಕೊಂಡು ಹೋಗಿದ್ದಾರೆಂದು. ಏಕೆಂದರೆ, ಚುನಾವಣೆಯಾದ ಮೇಲೆ ಮತ್ತೆ ಬರುತ್ತೇವೆಯೋ, ಇಲ್ಲವೋ .....

ಶ್ರೀ ಎಂ.ವೀರಪ್ಪಮೊಯಿಲಿ :- ತಾವು ಇದಕ್ಕೆಲ್ಲಾ ಬದ್ಧರು. ಅವರಿಗೆ ಇದರಲ್ಲಿ ಬದ್ಧತೆ ಇಲ್ಲ. ಏಕೆಂದರೆ, ಅವರು ಯಾವಾಗಲೂ ಕೂಡ ಜವಾಬ್ದಾರಿಯಿಂದ ತಪ್ಪಿಸಿಕೊಂಡೆ ಈ ಪರಿಸ್ಥಿತಿಗೆ ಬಂದಿದ್ದಾರೆ. ಏಕೆಂದರೆ, ಚಿನ್ನಪ್ಪರೆಡ್ಡಿ ವರದಿ ಎಷ್ಟು ವರ್ಷ ಇತ್ತು, ಇವರು ಎರಡು ವರ್ಷಗಳ ಕಾಲ ಆಳಿದರು. ಇವರು ಎಷ್ಟು ಸಚಿವ ಸಂಪುಟದ ಉಪ ಸಮಿತಿ ಮಾಡಿದರು, ಏಕೆ ನಿರ್ಣಯ ತೆಗೆದುಕೊಳ್ಳಲಿಲ್ಲ. ಅದಕ್ಕೆಲ್ಲಾ ಉತ್ತರ ಹೇಳುತ್ತೇನೆ. ಇದೇ ವೆಂಕಟಸ್ವಾಮಿ ವರದಿ ಬಂದಾಗ ಅದನ್ನು ರದ್ದು ಮಾಡಲಿಕ್ಕೆ ಚಳುವಳಿ ಮಾಡಿದವರಲ್ಲಿ ಇವರೂ ಒಬ್ಬರು, ಅದನ್ನು ಮರೆಯಬಾರದು. ಅವರಿಗೆ ಆಯೋಗದ ಶಿಫಾರಸ್ಸುಗಳಲ್ಲಿ ನಂಬಿಕೆ ಇಲ್ಲ, ಹಿಂದುಳಿದ ವರ್ಗಧ ಆಯೋಗದಲ್ಲಿ ನಂಬಿಕೆ ಇಲ್ಲ, ಆ ವರದಿಗಳನ್ನು ಓದುವುದಕ್ಕೆ ಪುರಸೊತ್ತು ಇಲ್ಲ. ಆದ್ದರಿಂದ, ನೀವು ಗಾಬರಿಯಾಗಬೇಡಿ, ಸಭಾತ್ಯಾಗ ಮಾಡಿದ ಅವರನ್ನು ನೀವು ಹಿಂಬಾಲಿಸಿ ಹೋಗಬೇಡಿ. I do not want Mr.Ramaiah to follow our friends.

ಶ್ರೀ ವಾಟಾಳ್ ನಾಗರಾಜ್ :-ನಾವು ಯಾರೂ ಹೇಳಿಯೇ ಇಲ್ಲ. ನೀವು ಈ ಮಾತನ್ನು ಯಾರಿಗೆ ಹೇಳುತ್ತಿದ್ದೀರಿ. ನಾವು ಎದ್ದು, ಸಭಾತ್ಯಾಗ ಮಾಡುತ್ತೇವೆಂದು ಮೊದಲೇ ನಿಮಗೆ ಹೇಳಲಿಲ್ಲ. ನಾವು ಮುಂದೆ ಏನು ಮಾಡುತ್ತೇವೆಯೋ ಆ ಪ್ರಶ್ನೆ ಬೇರೆ. ನೀವು ಮೊದಲೇ ಉತ್ತರ ಕೊಡುತ್ತಿದ್ದೀರೋ ಹೇಗೆ?

(ಉಪಾಧ್ಯಕ್ಷರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

*ಶ್ರೀ ವೈ. ಕೆ. ರಾಮಯ್ಯ :- ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚಿನ ರಾಜಕೀಯ ವಿದ್ಯಮಾನಗಳು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದ್ದರೆ, ವೈ.ಕೆ.ರಾಮಯ್ಯನವರು ಕಣ್ಣುಮುಚ್ಚಿಕೊಂಡು, ಯಾರನ್ನೂ ಹಿಂಬಾಲಿಸುವುದಿಲ್ಲವೆಂಬುದು ಅವರಿಗೆ ಗೊತ್ತು. I will not follow blindly anybody ನನ್ನದೇ ಆದಂಥ ನಿಲುವು ಇದೆ, ನನ್ನದೇ ಆದಂಥ ತೀರ್ಮಾನ ತೆಗೆದುಕೊಳ್ಳತಕ್ಕ ಶಕ್ತಿ ಇರುವುದರಿಂದ, ಯಾರನ್ನಾದರೂ ಫಾಲೋ ಮಾಡಿಕೊಂಡು, ಬ್ಲೈಂಡ್ ಆಗಿ ಹೋಗುತ್ತೇನೆ ಎನ್ನುವಂಥ ತಿಳುವಳಿಕೆ ಮಾನ್ಯಮಂತ್ರಿಯವರಿಗೆ ಹೇಗೆ ಬಂತೋ ನನಗೆ ಗೊತ್ತಿಲ್ಲ. ಅದೇನಾದರೂ ಆಗಲಿ, ಮೊಟ್ಟಮೊದಲನೆಯದಾಗಿ, ಒಂದು ವಿಷಯಕ್ಕೆ